Crl.Misc.ನಂಬರಃ 35/2020
ಪಿ. ಡಬ್ಲ್ಯೂಃ 1

ದಿಃ 05-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ ಎ.ಎನ್.ಟಿ ಇವರಿಂದಃ

ಎದುರುದಾರನು ನನ್ನ ಗಂಡನಾಗಿದ್ದು, ದಿಃ26-02-2020 ರಂದು ಗುರುಹಿರಿಯರ ಸಮಕ್ಷಮದಲ್ಲಿ ನಮ್ಮಿಬ್ಬರ ಮದುವೆಯು ಹಾಲಕ್ಕಿ ಗೌಡ ಸಮಾಜ ಭವನದಲ್ಲಿ ನಡೆದಿರುತ್ತದೆ. ಗುರು ಹಿರಿಯರು ನಿಚ್ಚಯಿಸಿದಂತೆ ನಮ್ಮಿಬ್ಬರ ಮದುವೆಯು ನಡೆದಿರುತ್ತದೆ. ಮದುವೆಯ ಸಂದರ್ಭದಲ್ಲಿ ನನ್ನ ತಂದೆ ತಾಯಿಯವರು ಸಾಕಷ್ಟು ಬಂಗಾರ ಆಭರಣಗಳನ್ನು ಹಾಕಿ ಮದುವೆ ಮಾಡಿ ಕೊಟ್ಟಿರುತ್ತಾರೆ. ನೆಕ್ಲೇಸ್, ಬಳೆ, ಕಿವಿಯೋಲೆ, ಮಂಗಳಸೂತ್ರ, ಮತ್ತು ಎದುರುದಾರನಿಗೆ 2 ಬಂಗಾರದ ಉಂಗುರ, ಬಂಗಾರದ ಚೈನ್ ಒಟ್ಟು ಸುಮಾರು 82 ಗ್ರಾಂ ಆಭರಣಗಳನ್ನು ಹಾಕಿದ್ದು, ಮದುವೆಯ ಖರ್ಚು ಸುಮಾರು ರೂ.5 ಲಕ್ಷಕ್ಕಿಂತ ಹೆಚ್ಚಾಗಿರುತ್ತದೆ. ಮದುವೆಯಾಗುವ ಸಂದರ್ಭದಲ್ಲಿ ಎದುರುದಾರನು ಸೀ ಬರ್ಡ ನೌಕಾನೆಲೆಯಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದು ಹೇಳಿ ಮದುವೆಯಾಗಿದ್ದನು. ಮದುವೆಯಾದ ನಂತರ ನಾನು ಕಾರವಾರದ ವೈಲುವಾಡ ಗ್ರಾಮಕ್ಕೆ ನನ್ನ ಗಂಡನ ಮನೆಗೆ ಹೋಗಿರುತ್ತೇನೆ. ಮದುವೆಯಾದ ನಂತರ ಎಲ್ಲ

ಆಚರಣೆಗಳನ್ನು ಮುಗಿಸಿದ ನಂತರ ಎದುರುದಾರನ 3 ಜನ ಅಕ್ಕಂದಿರು ಹಾಗೂ ಅವನ ತಾಯಿ ನೀನು ಸಾಕಷ್ಟು ಪ್ರಮಾಣದ ಒಡವೆಗಳನ್ನು ಹಾಕಿಕೊಂಡು ಬಂದಿರುವುದಿಲ್ಲ ಎಂದು ವರದಕ್ಷಿಣೆಗೆ ಕಿರುಕುಳ ಕೊಡಲು ಪ್ರಾರಂಬಿಸಿದರು. ಅವರು ಎಷ್ಟೇ ಕಿರುಕುಳವನ್ನು ಕೊಟ್ಟರೂ ಸಹ ನಾನು ಸಹಿಸಿಕೊಂಡು ಸುಮ್ಮನಿದ್ದೇನು, ಆದರೂ ಸಹ ಅವರು ತಮ್ಮ ಕಿರುಕುಳವನ್ನು ಕೊಡುತ್ತಾ ಬಂದಿರುತ್ತಾರೆ.

2. ದಿಃ 03-04-2020 ರಂದು ಎದುರುದಾರನ ತಾಯಿ ಮತ್ತು ಅವನ ಅಕ್ಕಂದಿರು ಎಲ್ಲರೂ ಸೇರಿ ನನ್ನನ್ನು ಹೊಡೆದು, ಎದುರುದಾರನು ನನ್ನ ತಲೆಯ ಕೂದಲನ್ನು ಎಳೆದು ಹಾಕಿ, ಕೆಳಗೆ ಬೀಳಿಸಿರುತ್ತಾರೆ. ಸದರಿ ವಿಷಯವನ್ನು ನಾನು ನನ್ನ ತಂದೆ ತಾಯಿಯವರಿಗೆ ತಿಳಿಸಿರುತ್ತೇನೆ. ಅದೇ ದಿನ ನನ್ನ ತಂದೆ ತಾಯಿಯರ ಜೊತೆಗೆ ಕಾರವಾರದ ಮಹಿಳಾ ಪೊಲೀಸ್ ಠಾಣೆಗೆ ಹೋಗಿದ್ದು, ಅವರು ಮಾರನೇ ದಿನ ಬರಲು ಹೇಳಿದ್ದರು. ನಂತರ ನಾನು ದಿಃ04-04-2020 ರಂದು ಪುನಃ ವಿಚಾರಣೆಗೆಂದು ಠಾಣೆಗೆ ಹೋಗಿರುತ್ತೇನೆ. ಪೊಲೀಸರ ಮುಂದೆ ಎದುರುದಾರನು ನನ್ನ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಆಶ್ವಾಸನೆಯನ್ನು ನೀಡಿ ಮುಚ್ಚಳಿಕೆಯನ್ನು ಬರೆದು ಕೊಟ್ಟಿರುತ್ತಾನೆ. ಆ ಸಮಯದಲ್ಲಿ ಕೋವೀಡ್ ಲಾಕ್ ಡೌನ್ ಇರುವ ಕಾರಣ ನನ್ನ ಗಂಡು ನನ್ನನ್ನು ನನ್ನ ತವರು ಮನೆಗೆ ಕಳುಹಿಸಿಕೊಟ್ಟಿರುತ್ತಾನೆ.

3. ದಿಃ08-06-2020 ರಂದು ಮತ್ತೆ ಕಾರವಾರ ಪೊಲೀಸ್ ಠಾಣೆಗೆ ಹಾಜರಾತಿಗೆ ಹೋಗಿದ್ದು, ಅಲ್ಲಿ ನಾನು ನನ್ನ ಗಂಡನ ಜೊತೆಗೆ ಆತನ ಮನೆಗೆ ಹೋಗಿರುತ್ತೇನೆ. ಆತನ ಮನೆಗೆ ಹೋದ ನಂತರ ನೀನು ನನ್ನ ವಿರುದ್ಧ ದೂರನ್ನು ಕೊಟ್ಟಿರುತ್ತೀಯಾ ಎಂದು ಫಿರ್ಯಾದಿ ಕೊಟ್ಟ ದ್ವೇಷದಿಂದ ಮತ್ತೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಆ ಒಂದು ದ್ವೇಷದಿಂದ ಎದುರುದಾರನು ವಿವಾಹ ವಿಚ್ಛೇದನ ಪಡೆದುಕೊಳ್ಳಲು ಹೇಳಿರುತ್ತಾನೆ. ಸದರಿ ಕಿರುಕುಳಕ್ಕೆ ಸಂಬಂಧಪಟ್ಟು ನಾನು ಕಾರವಾರದ ಕರುಣಾ ಸಾಂತ್ವನ ಕೇಂದ್ರಕ್ಕೆ ಅರ್ಜಿಯನ್ನೂ ಸಹ ಕೊಟ್ಟಿರುತ್ತೇನೆ. ನಂತರ ದಿಃ05-07-2020 ರಂದು ಎದುರುದಾರನು ನನ್ನ ಬಟ್ಟೆಗೆ ಬೆಂಕಿಯನ್ನು ಹಚ್ಚಿದ್ದು, ಈ ವಿಷಯನ್ನು ನಾನು ನನ್ನ ತಂದೆ ತಾಯಿಯರಿಗೆ ತಿಳಿರುತ್ತೇನೆ. ನನ್ನ ತಂದೆ ತಾಯಿಯವರು ನನ್ನ ಗಂಡನ ಮನೆಗೆ ಬಂದು ಆಶಾಡಕ್ಕೆ ನನ್ನ ಗಂಡನನ್ನು ಮನೆಗೆ ಬರಲು ಹೇಳಿದ್ದು, ಆದರೆ ನನ್ನ ಗಂಡ ಬರುವುದಿಲ್ಲ ಎಂದು ಹೇಳಿ, ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ಮತ್ತೆ ಕಳುಹಿಸಬೇಡಿ ಎಂದು ಹೇಳಿ ಕಳುಹಿಸಿರುತ್ತಾನೆ. ನಾನು ನನ್ನ ತವರು ಮನೆಯಲ್ಲಿ ಇದ್ದಾಗ ಪುನಃ ಪುನಃ ಕರೆ ಮಾಡಿ ಮತ್ತೆ ಏನಾದರೂ ನನ್ನ ಮನೆಗೆ ಬರಬೇಕಾದರೆ ವರದಕ್ಷಿಣೆಯನ್ನು ತೆಗೆದುಕೊಂಡು ಬರಬೇಕು ಎಂದು ಕಿರುಕುಳ ಕೊಟ್ಟಿರುತ್ತಾನೆ.

4. ದಿಃ23-08-2020 ರಂದು ಎದುರುದಾರನು 2-3 ಜನರನ್ನು ಕರೆದುಕೊಂಡು ನಮ್ಮ ಮನೆಗೆ ಬಂದು ಗಲಾಟೆ ಮಾಡಿ, ನೀನು ನನ್ನ ಜೊತೆಗೆ ಸಂಸಾರ ಮಾಡಬೇಕಾದರೆ

ರೂ.2 ಲಕ್ಷ ವರದಕ್ಷಿಣೆಯನ್ನು ತೆಗೆದುಕೊಂಡು ಬರಬೇಕು, ಇಲ್ಲವಾದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ. ಹಾಗೂ ಎದುರುದಾರನು ನನ್ನ ಹೆಸರಿನಲ್ಲಿ ನನಗೆ ತಿಳಿಸದೇ ಪೇಸಬುಕ್ ನಲ್ಲಿ ಖಾತೆಯನ್ನು ತೆರೆದಿರುತ್ತಾನೆ. ಎದುರುದಾರ ಹಾಗೂ ಆತನ ಕುಟುಂಬದವರು ಕೊಡುತ್ತಿರುವ ಕಿರುಕುಳದಿಂದ ನನಗೆ ದೈಹಿಕ ಹಾಗೂ ಮಾನಸಿಕ ಹಿಂಸೆಯಾಗಿರುತ್ತದೆ. ನಾನು ಅಂಕೋಲಾ ಪೊಲೀಸ್ ಠಾರಣೆಯಲ್ಲಿ ದೂರನ್ನು ಕೊಡಲು ಹೋಗಿದ್ದು, ಅದನ್ನು ಅವರು ಸ್ವೀಕರಿಸಿರುವುದಿಲ್ಲ, ಅವರು ಕಾರವಾರ ಮಹಿಳಾ ಪೊಲೀಸ್ ಠಾಣೆಯಲ್ಲಿಯೇ ಕೊಡಲು ತಿಳಿಸಿದ್ದರು. ಈ ಕುರಿತು ನಾನು ನ್ಯಾಯಾಲಯದ ಮುಂದೆ ಖಾಸಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಕಾರವಾರ ಪೊಲೀಸ್ ಠಾಣೆಯಲ್ಲಿ ಸದರಿ ಪ್ರಕರಣವನ್ನು ವಿಚಾರಣೆ ಮಾಡಿ, ಚಾರ್ಜಶೀಟ್ ಸಲ್ಲಿಸಿದ್ದು, ಆ ಪ್ರಕರಣದಲ್ಲಿ ನನ್ನ ಸಾಕ್ಷಿಯಾಗಿರುತ್ತದೆ. ಈ ಪ್ರಕರಣ ದಾಖಲಾದ ನಂತರ ನ್ಯಾಯಾಲಯದ ಆದೇಶದ ಪ್ರಕಾರ ಸ್ವಲ್ಪ ಕೊಟ್ಟಿದ್ದು, ಬಾಕಿ ಹಣವಾದ ರೂ,60 ಸಾವಿರ ಜೀವನಾಂಶ ಕೊಡುವುದು ಬಾಕಿ ಇರುತ್ತದೆ.

ನನ್ನ ಗಂಡ ಸೀ ಬರ್ಡ ನೌಕಾನೇಲೆಯಲ್ಲ್ ಕೆಲಸ ಮಾಡುತ್ತಿದ್ದು, ಪ್ರತಿತಿಂಗಳು ಸುಮಾರ ರೂ,30 ಸಾವಿರ ಸಂಬಳವನ್ನು ಪಡೆದುಕೊಳ್ಳುತ್ತಿದ್ದಾನೆ. ಎದುರುದಾರನು ಇದರ ಬಗ್ಗೆ ಕಾರವಾರ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚ್ಚೇದನ ಪ್ರಕರಣದಲ್ಲಿ ತನ್ನ ಕ್ವಾಲಿಫಿಕೇಷನ್ ಕೆಲಸ ಮಾಡುತ್ತಿರುವವರಿಗೆ ಸುಮಾರು ರೂ.20 ರಿಂದ 25 ಸಾವಿರ

ಸಂಬಳ ಬರುತ್ತದೆ ಎಂದು ಹೇಳಿರುತ್ತಾರೆ. ನನ್ನ ಗಂಡ ಕಾರವಾರ ನ್ಯಾಯಾಲಯದಲ್ಲಿ ವಿಚ್ಛೇದನ ಪ್ರಕರಣವನ್ನು ಸಲ್ಲಿಸಿರುತ್ತಾನೆ. ಸದರಿ ಪ್ರಕರಣ ನಿಖಾಲೆಯಾಗಿರುತ್ತದೆ. ನನಗೆ ದಿನನಿತ್ಯದ ಖರ್ಚು ವೆಚ್ಚವನ್ನು ನೋಡಿಕೊಳ್ಳುವ ಸಾಮಾರ್ಥ್ಯ ಇರುವುದಿಲ್ಲ, ನನಗೆ ಯಾವುದೇ ಕೆಲಸ ಸಿಕ್ಕಿರುವುದಿಲ್ಲ. ನನ್ನ ದಿನನಿತ್ಯದ ಖರ್ಚು ವೆಚ್ಚ, ಊಟ ಹಾಗೂ ಬಟ್ಟೆಗೆ ಪ್ರತಿತಿಂಗಳು ರೂ.8 ಸಾವಿರ ಜೀವನಾಂಶವನ್ನು ಎದುರುದಾರನಿಂದ ಕೊಡಿಸಬೇಕು ಎಂದು ನನ್ನ ಮಾಗಣಿ ಇರುತ್ತದೆ. ಈ ನ್ಯಾಯಾಲಯದಿಂದ ಆದಂತಹ ಆದೇಶದ ಪ್ರಕಾರ ಪ್ರತಿತಿಂಗಳು ರೂ.3 ಸಾವಿರ ಜೀವನಾಂಶವನ್ನು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಪ್ರತಿತಿಂಗಳು ಕೊಟ್ಟಿರುವುದಿಲ್ಲ, 6 ತಿಂಗಳಿಗೊಮ್ಮೆ ಸ್ವಲ್ಪ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಯನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.